**ಸಿಸಿ. ನಂ. 1130/2018        ಪಿ.ಡಬ್ಲೂ-1        ಹೆಸರು - ಉಮೇಶ್**

**ಸಾಕ್ಷಿಯನ್ನು ದಿನಾಂಕಃ 06.12.2022 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಸಿ ಎಲ್ ಬಿ    ವಕೀಲರಿಂದಃ-**

1 ನೇ ಆರೋಪಿ ನನ್ನ ಚಿಕ್ಕಪ್ಪ, 2 ನೇ ಆರೋಪಿ ನನ್ನ ಚಿಕ್ಕಪ್ಪನ ಮಗ. ನನ್ನ ಮತ್ತು ಆರೋಪಿತರ ಕುರಿತಾಗಿ ಸರ್ವೆ ನಂಬರ್ 146/2 ರ ಜಮೀನನ್ನು ಅಳತೆ ಮಾಡಿಸಿರುತ್ತೇವೆ ಎಂದರೆ ಸರಿ. ಸದರಿ ಅಳತೆಯ ಕಾಲಕ್ಕೆ 20 ಗುಂಟೆ ಜಮೀನು ಆರೋಪಿತರ ಸ್ವಾಧೀನದಲ್ಲಿದೆ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿ. ಸದರಿ ಜಮೀನಿನ ಕುರಿತಾಗಿ ನನ್ನ ಮತ್ತು ಆರೋಪಿತರ ನಡುವೆ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ನಾನು ಈ ದೂರನ್ನು ನೀಡುವ ಪೂರ್ವದಲ್ಲಿ ಕೆಲವು ದಿನಗಳ ನಡುವೆ ಅಪಘಾತ ಆಗಿತ್ತು ಎಂದರೆ ಸರಿಯಲ್ಲ. ಸದರಿ ಅಪಘಾತದ ಕುರಿತು ನಾನು ಬೇಗೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತದ ಕುರಿತು ಅಪಘಾತಪಡಿಸಿದ ವಾಹನದ ಮಾಲೀಕರಿಂದ ನಾನು ಪರಿಹಾರವನ್ನು ಪಡೆದುಕೊಂಡು ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ರಾಜಿ ಮಾಡಿಕೊಂಡಿದ್ದ ಕಾರಣ ನಾನು ಹಾಗೂ ಎದುರುದಾರರು ಯಾವುದೇ ದೂರನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ಸೇರಿದ ಜಾಗ ಎಂಬುದರ ಕುರಿತು ದಾಖಲಾತಿ ಇದೆ. ಸದರಿ ದಾಖಲಾತಿಯನ್ನು ನಾನು ಪೊಲೀಸರಿಗೆ ನೀಡಿಲ್ಲ. ನನ್ನ ತಾಯಿಗೆ ಸೇರಿದ ಯಾವುದೇ ಜಾಗ ಇಲ್ಲ ಹಾಗಾಗಿ ಸದರಿ ಜಾಗದ ಕುರಿತು ದಿನಾಂಕ 28.03.2018 ರಂದು ಯಾವುದೇ ಗಲಾಟೆ ನಡೆದಿಲ್ಲ ಮತ್ತು 1 ನೇ ಆರೋಪಿ ಕಲ್ಲಿನಿಂದ ನನ್ನ ತಲೆಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ದೊಣ್ಣೆಯಿಂದ ನನ್ನ ಎಡಗಾಲಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಕೈಯಿಂದ ನನ್ನ ಭುಜಗಳಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ 2 ಮತ್ತು 3 ರವರು ಗಲಾಟೆಯನ್ನು ಬಿಡಿಸಿಲ್ಲ ಎಂದರೆ ಸರಿಯಲ್ಲ. ಚಾಸಾ 6 ನನ್ನ ಸಹೋದರ, ಚಾಸಾ 5 ರವರು ನನ್ನ ಭಾವ, ಚಾಸಾ 2 ನನ್ನ ಜಮೀನನ್ನು ಕೋರಿಗೆ ಮಾಡುತ್ತಿಲ್ಲ. ನಾನು ನಂಜನಗೂಡಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಆಸ್ಪತ್ರೆಗೆ ಹೋಗುವ ಪೂರ್ವದಲ್ಲಿ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿಲ್ಲ. ನಾವು ಕಾರಿನಲ್ಲಿ ಆಸ್ಪತ್ರೆಗೆ ಹೋಗಿರುತ್ತೇವೆ. ನಾನು ಚಾಸಾ 2, 5 ಮತ್ತು 6 ರವರು ಆಸ್ಪತ್ರೆಗೆ ಹೋಗಿದ್ದೆವು. ಕಾರಿನಲ್ಲಿ ಆಸ್ಪತ್ರೆಗೆ ಹೋಗುವಾಗ ಪೊಲೀಸ್ ಠಾಣೆಯ ಮುಂಭಾಗವೇ ಹೋಗಬೇಕು ಎಂದರೆ ಸರಿ. ಆರೋಪಿತರು

ನನಗೆ ಯಾವುದೇ ಹಲ್ಲೆ ಮಾಡಿಲ್ಲ ಆದಾಗ್ಯೂ ಆರೋಪಿತರ ವಿರುದ್ದ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ನಾನು ಇತ್ತೀಚೆಗೆ ಒಂದು ವರ್ಷದ ಹಿಂದೆ ರೈತ ಸಂಘಕ್ಕೆ ಸೇರಿರುತ್ತೇನೆ. ನಾನು ರೈತರ ಸಂಘಕ್ಕೆ ಸೇರಿರುವುದನ್ನು ದುರುಪಯೋಗಪಡಿಸಿಕೊಂಡು ಸದರಿ ಸಂಘದವರು ಮೂಲಕ ಆರೋಪಿತರ ವಿರುದ್ದ ಸುಳ್ಳು ದೂರನ್ನು ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಗಾಡಿಯಲ್ಲಿ ಹೋಗುವಾಗ ಬಿದ್ದು ತಲೆಗೆ ಮತ್ತು ಕಾಲಿಗೆ ಗಾಯ ಮಾಡಿಕೊಂಡಿದ್ದು ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

**ಸಹಿ/-**
**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**
**ನಂಜನಗೂಡು**